
ಕವಿತೆ



## ಚಂದ್ರಶೇಖರ ತಾಳ್ಯ

ಕಲೆ: ಸೃಜನ್



# ಮಹಾ ನಿರ್ಗಮನದ ಚೆಲುವು

ಅಂತಹ ಚಲುವನ್ನೇ ನಾನು ನೋಡಿರಲಿಲ್ಲ
ಆದರ ಸೌಂದರ್ಯ ಅಸದಳ, ಅಪೂರ್ವ
ತಣ್ಣಗೆ ಕಣಿವೆಯಾಳಕ್ಕಿಳಿದು, ಮಂಜು ಹನಿಗಳ
ಮೈಗೆರಚಿಕೊಂಡಂತೆ
ಹೂ ಪಕಳೆಗಳ ಮೆದು ಸ್ಪರ್ಶದ
ಪರಾಗದ ಪರಿಮಳದ ಸದ್ದಿಲ್ಲದ ಸಂತೆ.

ತೆರೆದ ಕಣ್ಣೊಳಗೇ ಧ್ಯಾನಿಸುತ್ತಾ
ಮೋಡಗಳ ಕಂತೆಯೊಳಗೆ ಏಕಾಂತದ ಅಂತಸ್ತುಗಳನೇರಿ
ನೀಲಾಕಾಶದ ಹರವಿನಲ್ಲಿ ಸುಮ್ಮನೇ ತೇಲುತ್ತ ತೇಲುತ್ತ
ತೇಲುತಲೇ ಇರುವ ತಡೆರಹಿತ ವಾಯುವಿಹಾರ
ಉಸಿರಾಡಿದರೆ ಸದ್ದೆಂಬಂತೆ ಹೊಳೆಗಳು
ತಮಗೆ ತಾವೇ ಮುಚ್ಚಿಕೊಂಡ ಆಮೋದ
ಕಣ್ಣೆವೆಯ ನಿಶ್ಚಲ ನೋಟದಲೇ
ಕಾಂತಿ ಅಂತರಂಗಕ್ಕಿಳಿದ ಮಹಾ ಬೆಳಗಿನ ದರ್ಶನ
ವಾಕರಿಕೆಯಿರದ ತೇಕರಿಕೆಯಿರದ ನಿರುಮ್ಮಳ
ಬದುಕಿನ ಕೊನೆಯ ಅಂತಸ್ತಿನ ಶಿಸ್ತು
ವಿರಕ್ತ ಮನದ ರತಿ ಸಂತೃಪ್ತಿಯ ಬಯಲು
ನನ್ನ ಚೆಲುವಾದ ಸಾವಿನ ಸುತ್ತ ಜನ ನಿರ್ಜನ
ವೇದಿಕೆಯಲಿ ಸುತ್ತಲೂ ಹರಡಿದ ಹಸಿರು ಜ್ವಾಲೆಯ
ತಂಪು ಕಾಣ್ಕೆ, ಭೂತಾಯಿಯ ಒಡಲಾಳದ ಶೀತಲ ಬಯಕೆ.



2
ಮೆಲ್ಲಗೆ ಸರಿದು ಹೋದ ಜನ ನಿರ್ಜನ ಅವಕಾಶ
ಎಷ್ಟು ವಿಸ್ತರಿಸಿದರೂ ವಿಸ್ತರಿಸಿಕೊಳ್ಳುತಲೇ ಇರುವ
ಸ್ವಾತಂತ್ರ್ಯದ ಅಸೀಮ ನಿಸ್ಸೀಮ ನೆರಳಿಲ್ಲದ ನೆರಳು
3
ನನಗೀಗ ಬಾಧೆಯಿಲ್ಲ, ಧಾವಂತವಿಲ್ಲ, ಸ್ಪರ್ಶ, ರೂಪ, ರಸ, ಗಂಧವಿಲ್ಲ
ನಾನು ಮತ್ತು ಸಾವೆಂಬ ಭೇದವಿಲ್ಲ
ಅದ್ವಯದ ಮಹಾ ನಿರ್ಗಮನದ ಈ ಅಸದೃಶ ಚೆಲುವಿಗೆ
ಇನ್ನಾವುದೂ ಸಾಟಿಯಿಲ್ಲ.